# IN THE COURT OF THE ADDL. SENIOR CIVIL JUDGE & JMFC., GUBBI

# OS - 88/2025

Witness present and duly sworn on : 24.02.2026.

Cross Examination: by Counsel for Defendant No.1 and 2:

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ತ್ಯಾಗಟೂರಿನ ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದೇನು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಒಟ್ಟು 4 ಎಕರೆ ಹನುಮಂತಯ್ಯನವರಿಗೆ ಮಂಜೂರು ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಪರವಾಗಿ ಹನುಮಂತಯ್ಯ ನವರಿಗೆ ಮಂಜೂರು ಆಗಿತ್ತು. ದಾವಾ ಆಸ್ತಿಯು ಸೇರಿ ಒಟ್ಟು 4 ಎಕರೆ ಜಮೀನು ಹನುಮಂತಯ್ಯನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಹನುಮಂತಯ್ಯನವರ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯು 4 ಎಕರೆ ಜಮೀನಿಗೆ KGB ಬ್ಯಾಂಕ್ ನಲ್ಲಿ ಲೋನ್ ತೆಗೆದುಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ರೀ ಸರ್ವೆ ನಂಬರ್ ಯಾವಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಇತ್ತಿಚೇಗೆ ದಾಖಲೆ ನೋಡಿದಾಗ ತಿಳಿದಿರುತ್ತದೆ. ಸದರಿ ರೀ ಸರ್ವೆ ನಂಬರ್ ನಿಪಿ-10 ರಂತೆ ದಿನಾಂಕಃ 11.11.1974 ರಲ್ಲಿ ಆಗಿದೆ ಎಂದು ದಾಖಲೆ ಹಾಜರುಪಡಿಸಿದ್ದೇನೆಂದರೆ ಸರಿ.

ದಿನಾಂಕಃ 06.07.1970 ರಂದು ಯಲ್ಲಯ್ಯನವರು ಹನುಮಯ್ಯ ನವರಿಗೆ ಕ್ರಯಪತ್ರವು ಸೃಷ್ಟಿರುವ ದಾಖಲೆ ಎಂದರೆ ಸರಿಯಲ್ಲ. ದಿನಾಂಕಃ 05.12.1977 ಕ್ರಯಪತ್ರವನ್ನು ಈ ದಾವೆಯ ಸಲುವಾಗಿ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನಿಪಿ-1 ದಾಖಲೆಯನ್ನು ನಾನು ಓದಿಲ್ಲ. ಸದರಿ ದಾಖಲೆಯಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಕ್ರಯಕ್ಕೆ ಪಡೆದಿದ್ದೇವೆ ಮತ್ತು ಪಹಣಿಯಲ್ಲಿ ಹನುಮಂತಯ್ಯನವರಿಗೆ 2 ಎಕರೆ ಜಮೀನು ಬಂದಿದೆ. ಪಹಣಿ ಪತ್ರಿಕೆಯನ್ನು ಇತ್ತಿಚೇಗೆ ಪರಿಶೀಲನೆ ಮಾಡಿರುತ್ತೇನೆ. ದಿನಾಂಕಃ 05.12.1977 ರ ಕ್ರಯಪತ್ರದ ಮಾಹಿತಿಯನ್ನು ನಾನು ತಿಳಿದುಕೊಂಡಿದ್ದೇನೆ. ಸದರಿ ದಾಖಲೆಯಲ್ಲಿ ಸರ್ವೆ ನಂ.9/1 ಎಂದು ನಮೂದು ಇದೆ

ಎಂದರೆ ಸರಿ. ಆಸ್ತಿಯನ್ನು ಕಬಳಿಸಲು ಮತ್ತು 1, 2 ನೇ ಪ್ರತಿವಾದಿಗಳಿಗೆ ಮೋಸ ಮಾಡಲು ಸದರಿ ದಾಖಲೆಯನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇಲೆ ತಹಶೀಲ್ದಾರ್ ಉಪವಿಭಾಗಾಧಿಕಾರಿಗೆ ಅರ್ಜಿ ಕೊಟ್ಟಿದ್ದೇವು. ಅವರು ನ್ಯಾಯಾಲಯಕ್ಕೆ ಹೋಗಲು ತಿಳಿಸಿದರು. ಸದರಿ ಅರ್ಜಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಿನಾಂಕಃ 05.12.1977 ಕ್ರಯಪತ್ರದ ಪೂರ್ವದಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಲಿಲ್ಲ. ಸಾಕ್ಷಿ ಮುಂದುವರೆದು ಹನುಮಂತಯ್ಯನವರು 2 ಎಕರೆಯ ಅನುಭವದಲ್ಲಿ ಇದ್ದರು ಮತ್ತು ಪಹಣಿ ಅವರ ಹೆಸರಿಗೆ ಇದ್ದ ಕಾರಣ ಖರೀದಿ ಮಾಡಿರುತ್ತೇವೆ. ಹನುಮಂತಯ್ಯ ಮತ್ತು 3 ನೇ ಪ್ರತಿವಾದಿಗಳ ಹೆಸರಿಗೆ ಖಾತೆ ಮತ್ತು ಪಹಣಿ ಇರಲಿಲ್ಲ ಎಂದರೆ ಖಾತೆ ಇರಲಿಲ್ಲ ಆದರೆ 2 ಎಕರೆಯ ಪಹಣಿ ಇತ್ತು. ಆ ರೀತಿ ಪಹಣಿ ಇರುವುದಿಲ್ಲ ಎಂದರೆ ಸರಿಯಲ್ಲ.

ಹನುಮಂತಯ್ಯನವರ ಮರಣದ ನಂತರ ಅವರ ಮಕ್ಕಳು ಪೌತಿ ವಾರಸು ಪಹಣಿ ಬದಲಾವಣೆ ಮಾಡಿಕೊಂಡಿದ್ದಾರೆಂದರೆ ಸರಿ. ಹನುಮಂತಯ್ಯನವರ ಮಕ್ಕಳು ಸದರಿ ಜಮೀನಿನ ಅನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 05.12.1977 ನಂತರ ಈ ದಾವೆಯನ್ನು ಹೊರತುಪಡಿಸಿ ಬೇರೆ ದಾವೆಯನ್ನು ಸಲ್ಲಿಸಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹನುಮಂತಯ್ಯ ಮತ್ತು ಟಿ.ಆರ್ ಯಲ್ಲಯ್ಯ ರವರು ಮಾಡಿಕೊಡುತ್ತೇವೆಂದು ಕೇಳುತ್ತಿದ್ದ ಕಾರಣ ದಾವೆ ಸಲ್ಲಿಸಿರಲಿಲ್ಲ. 1 ಮತ್ತು 2 ನೇ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಲು ನಾನು ಮತ್ತು 3 ನೇ ಪ್ರತಿವಾದಿ ಶಾಮಿಲಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. 3 ನೇ ಪ್ರತಿವಾದಿ ಯಲ್ಲಯ್ಯ ರವರ ಹೆಸರಿಗೆ ಖಾತೆ ಪಹಣಿ ಬಂದಿರಲಿಲ್ಲ ಎಂದರೆ ಸರಿಯಲ್ಲ.

ಹನುಮಂತಯ್ಯನವರ ಸ್ವಯಾರ್ಜಿತ ಆಸ್ತಿ ಆಗಿದ್ದು, ಅದರಲ್ಲಿ 3 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಒಟ್ಟು ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತಾರೆ. ದಿನಾಂಕಃ 05.12.1977 ಕ್ರಯಪತ್ರದ ಮೂಲ ಪ್ರತಿ ಕಳೆದು ಹೋಗಿದೆ. ಯಾವಾಗ ಕಳೆದು ಹೋಗಿದೆ ಎಂದು ನನಗೆ ಗೊತ್ತಿಲ್ಲ. ಕಳೆದು ಹೋಗಿರುವ ಬಗ್ಗೆ ದೂರು ನೀಡಿಲ್ಲ. ಮೂಲ ಪ್ರತಿಯನ್ನು ಹಾಜರುಪಡಿಸಿದರೆ ಸತ್ಯಾಂಶ ಹೊರಬರುತ್ತದೆ ಎಂದು ಅದರ ನಕಲನ್ನು ಸೃಷ್ಟಿಸಿ ಹಾಜರುಪಡಿಸಿದ್ದೇವೆಂದರೆ ಸರಿಯಲ್ಲ. 1 ಮತ್ತು 2 ನೇ

ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದು ವ್ಯವಸಾಯ ಮಾಡುತ್ತಿದ್ದಾರೆಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ರಾಗಿ ಬೆಳೆದಿದ್ದೇನೆ. ಅದಕ್ಕೆ ಸಂಬಂಧಿಸಿರುವ ಬೆಳೆ ಧೃಡೀಕರಣ ಪತ್ರವನ್ನು ನಾನು ಹಾಜರುಪಡಿಸಿಲ್ಲ. ನಾನು ರಾಗಿ ಬೆಳೆಯನ್ನು ಬೆಳೆದಿಲ್ಲ ಮತ್ತು 1, 2 ನೇ ಪ್ರತಿವಾದಿಗಳು ಸದರಿ ಆಸ್ತಿಯ ಸ್ವಾಧೀನದಲ್ಲಿ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination – Nil.**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi